# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಕೋಲಾರ ಜಿಲ್ಲೆ ಮತ್ತು ತಾಲ್ಲೂಕು ವಡಗೂರು ಗ್ರಾಮ ಪಂಚಾಯತ್‌ನ 1) ಕಾರ್ಯದರ್ಶಿಯಾಗಿದ್ದ ಶ್ರೀ ಎಂ.ಕೃಷ್ಣಪ್ಪ ಮತ್ತು 2) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ ವೈಶಾಲಿ ಸಾಗರ ರವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14(ಎ) ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:** ನಿಬಂಧಕರು ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ **D.O.No.Compt/Uplok/BD-3585/2015/DRE-4,** ದಿನಾಂಕ:23-04-2019 .

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ರವರು ದಿನಾಂಕ:15–04–2019 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(3) ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಕೋಲಾರ ಜಿಲ್ಲೆ ಮತ್ತು ತಾಲ್ಲೂಕು ಕೆಂಬೋಡಿ ಗ್ರಾಮ ಮತ್ತು ಅಂಚೆ ನಿವಾಸಿಯಾದ ಶ್ರೀ.ಕೆ.ಎನ್ ರವೀಂದ್ರ ಕುಮಾರ್ ಬಿನ್ ನಾರಾಯಣಪ್ಪ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಮತ್ತು ತಾಲ್ಲೂಕು ವಡಗೂರು ಗ್ರಾಮ ಪಂಚಾಯತ್‌ನ 1) ಕಾರ್ಯದರ್ಶಿಯಾಗಿದ್ದ ಶ್ರೀ ಎಂ.ಕೃಷಪ್ಪ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ ವೈಶಾಲಿ ಸಾಗರ (ಇನ್ನು ಮುಂದೆ 1 ಮತ್ತು 2ನೇ 'ಎದುರುದಾರರು' ಎಂದು ಕ್ರಮವಾಗಿ ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 9 ರಡಿ ತನಿಖೆಗೆ ತೆಗೆದುಕೊಂಡಿದೆ.

**ದೂರಿನ ಸಂಕ್ಷಿಪ್ತ ವಿವರಣೆ:–** ಕೋಲಾರ ತಾಲ್ಲೂಕು ವಡಗೂರು ಗ್ರಾಮ ಪಂಚಾಯತ್‌ಗೆ ನಿರ್ಮಲ ಭಾರತ ಅಭಿಯಾನ ಮತ್ತು ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ಬಂದ ಅನುದಾನದಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರಿದ ಕೆಂಬೋಡಿ, ಕಾಳಹಸ್ತೀಪುರ, ಸೀಸಂದ್ರ ಮುಂತಾದ ಹಳ್ಳಿಗಳಲ್ಲಿ ಶೌಚಾಲಯ ನಿರ್ಮಾಣ ಮಾಡದೇ ನಕಲಿ ದಾಖಲೆಗಳನ್ನು ಸೃಷ್ಟಿಸಿ ಎರಡೆರಡು ಬಾರಿ ಹಣ ಬಿಡುಗಡೆ ಮಾಡಿ ಅವ್ಯವಹಾರ ನಡೆಸಿದ್ದಾರೆ ಹಾಗೂ 13ನೇ ಹಣಕಾಸು ಯೋಜನೆಯಡಿ ಅನುಮೋದನೆ ಪಡೆಯದೇ ಹಾಗೂ ಕಾಮಗಾರಿಗಳನ್ನು ನಡೆಸದೇ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಹೇಳಿದ್ದಾರೆ.

ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–ತಾವು ವಡಗೂರು ಗ್ರಾಮ ಪಂಚಾಯತ್‌ನಲ್ಲಿ ದಿನಾಂಕ: 16/04/08 ರಿಂದ 26/10/09 ರವರೆಗೆ ಹಾಗೂ ದಿನಾಂಕ:21/12/11 ರಿಂದ 22/11/12 ರವರೆಗೆ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದು, ದೂರಿನಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ಉಲ್ಲೇಖಿಸಿ ತಮ್ಮ ಕಾರ್ಯಾವಧಿಯಲ್ಲಿ ಮಾಡಿದ ಹಣ ಸಂದಾಯದ ಬಗ್ಗೆ ಹೇಳುತ್ತಾ ತಾವು ಯಾವುದೇ ರೀತಿಯಲ್ಲಿ ಸರ್ಕಾರಿ ಅನುದಾನವನ್ನು ದುರ್ಬಳಕೆ ಮಾಡಿಲ್ಲವೆಂದು ಹೇಳಿದ್ದಾರೆ.

ಎರಡನೇ(2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ.

ಕಡತ ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) 1ನೇ ಎದುರುದಾರರ ಕಾರ್ಯಾವಧಿಯಲ್ಲಿ:–

1. ಶ್ರೀಮತಿ ಯಲ್ಲಮ್ಮ ಕೋಂ ಲೇ.ಹನುಮಂತಪ್ಪ ರವರ ಮನೆಗೆ ಬೆಂಕಿ ಬಿದ್ದ ಕಾರಣ ರೂ.5000/- ಪರಿಹಾರವನ್ನು ನೀಡಿರುವುದು ಕಂಡು ಬಂದಿದೆ. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 440 ಗ್ರಾಪಂಅ 2015 ದಿ:22-07-15 ರನ್ವಯ ಸಹಾಯ ಧನವನ್ನು ನೀಡಲು ಮಾತ್ರ ಅವಕಾಶವಿದ್ದು ಬೆಂಕಿ ಬಿದ್ದ ಪ್ರಕರಣಗಳಲ್ಲಿ ಪರಿಹಾರ ನೀಡಲು ಅವಕಾಶವಿಲ್ಲ. ಗ್ರಾಮ ಪಂಚಾಯತ್ ವತಿಯಿಂದ ಪುಸ್ತಕ ಖರೀದಿಗೆ ಹಣ ನೀಡಿರುವುದು ಕಂಡು ಬಂದಿದೆ. ಮೇಲೆ ಹೇಳಿದ ಸುತ್ತೋಲೆಯಲ್ಲಿ ಪುಸ್ತಕ ಖರೀದಿಗೆ ಹಣ ವ್ಯಯಿಸಲು ಅವಕಾಶವಿಲ್ಲ.

2. ವಡಗೂರು ಗ್ರಾಮದ ಎಸ್‌ಸಿ ಕಾಲೋನಿಯಲ್ಲಿ ಚರಂಡಿಗಳ ಸ್ವಚ್ಛತೆ ಮತ್ತು ಹೂಳೆತ್ತುವ ಕಾಮಗಾರಿ ಸೇರಿದಂತೆ ಇತರೆ ವೆಚ್ಚಗಳ ಬಾಬ್ತು ಒಟ್ಟು ರೂ.11,975/- ಗಳನ್ನು ಶ್ರೀಮತಿ ಜಯಮ್ಮ ರವರಿಗೆ ಪಾವತಿಸಿದೆ.ಸದರಿ ಕಾಮಗಾರಿ ಅಕುಶಲ ಕಾಮಗಾರಿಯಾಗಿದ್ದು, ಎಂಜಿಎನ್‌ಆರ್‌ಇಜಿ ಯೋಜನೆಯಡಿ ನಿರ್ವಹಿಸಬೇಕು. ಆದರೆ ಸದರಿ ಯೋಜನೆಯಡಿ ನಿರ್ವಹಿಸಿದ ಬಗ್ಗೆ ದಾಖಲೆಗಳಿಲ್ಲ. ಒಟ್ಟು 55 ಜನರ ಕೂಲಿ ಹಣವನ್ನು ಒಬ್ಬ ವ್ಯಕ್ತಿಗೆ ನೀಡಿದೆ.

3. ಶ್ರೀ ನಾರಾಯಣಸ್ವಾಮಿ ಬಿನ್ ಕೃಷ್ಣಪ್ಪ ಎಂಬುವವರು ಅಪಘಾತಕ್ಕೊಳಗಾದ ಬಗ್ಗೆ ಪರಿಹಾರವಾಗಿ ರೂ.10,000/-ಗಳನ್ನು ನೀಡಿರುವುದು ಕಂಡು ಬಂದಿದೆ. ಸದರಿ ಮೊತ್ತ ಶ್ರೀ ನಾರಾಯಣಸ್ವಾಮಿ ಬಿನ್ ಕೃಷ್ಣಪ್ಪ ರವರ ಖಾತೆಗೆ ಜಮಾ ಆದ ಬಗ್ಗೆ ದಾಖಲೆಯಿಲ್ಲ. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 440 ಗ್ರಾಪಂಅ 2015 ದಿ:22-07-15 ರಲ್ಲಿ ದೀರ್ಘ ಕಾಲ ಖಾಯಿಲೆಯಿಂದ ಬಳಲುತ್ತಿರುವವರಿಗೆ ಮಾತ್ರ ಗರಿಷ್ಠ ರೂ.5000/- ವರೆಗೆ ಚಿಕಿತ್ಸೆಗೆ ಸಹಾಯ ಧನ ನೀಡಲು ಅವಕಾಶವಿದ್ದು, ಅಪಘಾತ ಪ್ರಕರಣಗಳಲ್ಲಿ ಪರಿಹಾರ ನೀಡಲು ಅವಕಾಶವಿಲ್ಲ ಹಾಗೂ ಸದರಿ ಶ್ರೀ ನಾರಾಯಣಸ್ವಾಮಿ ಬಿನ್ ಕೃಷ್ಣಪ್ಪ ರವರು ಗಾಯಗೊಂಡ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಮತ್ತು ಮುಂತಾದ ದಾಖಲೆಗಳಿಲ್ಲ.

4. ಶ್ರೀ ಸಿಂಹಾದ್ರಿ ಆರ್ ಬಿನ್ ಲೇ.ರಾಧಾಕೃಷ್ಣ ಆರ್ ರವರು ಆಕಸ್ಮಿಕವಾಗಿ ಕೆರೆಯಲ್ಲಿ ಬಿದ್ದು ಮೃತಪಟ್ಟ ಬಗ್ಗೆ ಸದರಿಯವರ ತಾಯಿ ಶ್ರೀಮತಿ ವಸಂತಮ್ಮ ರವರಿಗೆ ರೂ.5000/- ಸಹಾಯ ಧನವನ್ನು ನೀಡಿರುವುದು ಕಂಡು ಬಂದಿದೆ.ಸದರಿ ಮೊತ್ತ ಶ್ರೀಮತಿ ವಸಂತಮ್ಮ ರವರ ಖಾತೆಗೆ ಜಮಾ ಆದ ಬಗ್ಗೆ ದಾಖಲೆಯಿಲ್ಲ. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 440 ಗ್ರಾಪಂಅ 2015 ದಿ:22-07-15 ರನ್ವಯ ಸಹಾಯ ಧನವನ್ನು ನೀಡಲು ಮಾತ್ರ ಅವಕಾಶವಿದ್ದು, ಆಕಸ್ಮಿಕ ಸಾವಿನ ಪ್ರಕರಣಗಳಲ್ಲಿ ಪರಿಹಾರ ನೀಡಲು ಅವಕಾಶವಿಲ್ಲ.

5. ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ಬಾಬ್ತು ರೂ.5000/- ಗಳನ್ನು ಡೀಸೆಲ್‌ಗೆ ಮುಂಗಡವಾಗಿ ಶ್ರೀ.ಶ್ರೀನಿವಾಸ್ ಬಿನ್ ಕೃಷ್ಣಪ್ಪರವರಿಗೆ ಹಾಗೂ ಇತರೆ ಖರ್ಚುಗಳು ಸೇರಿದಂತೆ ಒಟ್ಟು ರೂ. 9623/- ಗಳ ಖರ್ಚು ಹಾಕಿರುವುದು ಕಂಡು ಬಂದಿದೆ.ಸದರಿ ರೂ.5000/- ಮೊತ್ತ ಶ್ರೀ.ಶ್ರೀನಿವಾಸ್ ಬಿನ್ ಕೃಷ್ಣಪ್ಪರವರ ಖಾತೆಗೆ ಜಮಾ ಆದ ಬಗ್ಗೆ ಯಾವುದೇ ದಾಖಲೆಗಳಿಲ್ಲ.ಇತರೆ ಖರ್ಚುಗಳಿಗೆ ಬಿಲ್, ವೋಚರ್ ಇಲ್ಲ ಮತ್ತು ಕೊಟೇಷನ್ ಕರೆದ ಬಗ್ಗೆ ದಾಖಲೆಗಳಿಲ್ಲ.

6. ಪಂಚಾಯತಿಯ ಇತರೆ ಆಡಳಿತಾತ್ಮಕ ವೆಚ್ಚಗಳಿಗೆ ಒಟ್ಟು ರೂ.4734/- ಗಳನ್ನು ಖರ್ಚು ಮಾಡಿರುವುದು ಕಂಡು ಬಂದಿದೆ.ಸದರಿ ಖರ್ಚುಗಳಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳಿಲ್ಲ.

7. ಬೀದಿ ದೀಪಗಳು ಮತ್ತು ಪೈಪ್‌ಲೈನ್ ದುರಸ್ತಿ ಬಾಬ್ತು ಒಟ್ಟು ರೂ.2680/- ಗಳಿಗೆ ಖರ್ಚು ಹಾಕಿದ್ದು, ಸದರಿ ಖರ್ಚಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳಿಲ್ಲ.

8. ರಾಮಸಂದ್ರ ಬೋವಿ ಕಾಲೋನಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿದ ಬಾಬ್ತು ಒಟ್ಟು ರೂ.18,200/- ಗಳಿಗೆ ಖರ್ಚು ಹಾಕಿರುವುದು ಕಂಡು ಬಂದಿದೆ. ಸದರಿ ಮೊತ್ತವನ್ನು ಶ್ರೀ ಕೆ.ಶ್ರೀನಿವಾಸ ಎಂಬುವವರಿಗೆ ನೀಡಿದೆಯೆಂದು ಹೇಳಿದ್ದು, ಸದರಿಯವರಿಗೆ ಟ್ಯಾಂಕರ್ ಇದ್ದ ಬಗ್ಗೆ ಮತ್ತು ಸದರಿ ಮೊತ್ತ ಅವರ ಖಾತೆಗೆ ಜಮಾ ಆದ ಬಗ್ಗೆ ದಾಖಲೆಯಿಲ್ಲ.

9. ಶ್ರೀ ಸುರೇಶ ಬಿನ್ ವೆಂಕಟೇಶಪ್ಪ, ಶ್ರೀ ಶಿವರಾಜ್ ಕೆ.ಎನ್ ಬಿನ್ ಸೊಳ್ಳೆಣ್ಣಪ್ಪ ಮತ್ತು ಶ್ರೀ ಕೆ.ವಿ.ಅಂಜಪ್ಪ ಬಿನ್ ವೆಂಕಟಪ್ಪ ರವರಿಗೆ ತಲಾ ರೂ.2500/- ಗಳನ್ನು ನೀಡಿದೆ.ಯಾವ ಉದ್ದೇಶಕ್ಕಾಗಿ ಸದರಿ ಮೊತ್ತವನ್ನು ಅವರಿಗೆ ನೀಡಲಾಗಿದೆ ಮತ್ತು ಸದರಿ ಮೊತ್ತ ಅವರವರ ಖಾತೆಗೆ ಜಮಾ ಆದ ಬಗ್ಗೆ ದಾಖಲೆಗಳಿಲ್ಲ. ವ್ಯಾಸಂಗಕ್ಕಾಗಿ ಸದರಿ ಮೊತ್ತವನ್ನು ನೀಡಿದೆಯೆಂದು 1ನೇ ಎದುರುದಾರರು ಹೇಳಿದ್ದು, ಸದರಿಯವರುಗಳು ಯಾವ ತರಗತಿಯಲ್ಲಿ ಓದುತ್ತಿದ್ದರು ಎಂಬ ಬಗ್ಗೆ ದಾಖಲೆಗಳಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಸಹಾಯ ಧನವನ್ನು ವಾರ್ಷಿಕವಾಗಿ ಗರಿಷ್ಟ ರೂ. 1500/-ಗಳನ್ನು ಮಾತ್ರ ನೀಡಲು ಮೇಲೆ ಹೇಳಿದ ಸುತ್ತೋಲೆಯಲ್ಲಿ ಅವಕಾಶವಿದೆ.

10. ಅಜ್ಜಪ್ಪನಹಳ್ಳಿ ಮತ್ತು ಚದುಮನಹಳ್ಳಿ ಗ್ರಾಮಗಳ ಕುಡಿಯುವ ನೀರಿನ ಮೋಟಾರ್ ರಿಪೇರಿ ಬಾಬ್ತು ಒಟ್ಟು ರೂ. 22,711/- ಗಳಿಗೆ ಖರ್ಚು ಹಾಕಿದ್ದು, ಸದರಿ ಖರ್ಚಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳಿಲ್ಲ.

11. ರಾಮಸಂದ್ರ ಬೋವಿ ಕಾಲೋನಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿದ ಬಾಬ್ತು ಒಟ್ಟು ರೂ. 27,300/- ಗಳಿಗೆ ಖರ್ಚು ಹಾಕಿರುವುದು ಕಂಡು ಬಂದಿದೆ. ಸದರಿ ಮೊತ್ತವನ್ನು ಶ್ರೀ ಕೆ.ಶ್ರೀನಿವಾಸ ಎಂಬುವವರಿಗೆ ನೀಡಿದೆಯೆಂದು ಹೇಳಿದ್ದು, ಸದರಿಯವರಿಗೆ ಟ್ಯಾಂಕರ್ ಇದ್ದ ಬಗ್ಗೆ ಮತ್ತು ಸದರಿ ಮೊತ್ತ ಅವರ ಖಾತೆಗೆ ಜಮಾ ಆದ ಬಗ್ಗೆ ದಾಖಲೆಯಿಲ್ಲ. ಕ್ರ.ಸಂ.1ರಿಂದ 4 ರ ಖರ್ಚುಗಳನ್ನು ಎಸ್‌ಸಿ/ಎಸ್‌ಟಿ (ಶೇ.27.75 ಕಾರ್ಯಕ್ರಮ) ಖಾತೆಯಿಂದ ಮಾಡಿರುವುದು ತಿಳಿದುಬಂದಿರುತ್ತದೆ.

2) ಆದ ಕಾರಣ ಹಿಂದಿನ ಉಪಕಂಡಿಕೆಗಳಲ್ಲಿ ಹೇಳಿದ ಕ್ರಸಂ 1 ರಿಂದ 11ರ ಖರ್ಚುಗಳು ನಿಯಮಬಾಹಿರ ಎಂದು ಕಂಡು ಬಂದಿದ್ದು, ಸದರಿ ಒಟ್ಟು ರೂ. 1,25,051/- ದುರುಪಯೋಗ ಆಗಿರುವುದು ಕಡತದಲ್ಲಿ ಲಭ್ಯವಿರುವ ದಾಖಲೆಗಳಿಂದ ಮೇಲ್ನೋಟಕ್ಕೆ ಕಂಡು ಬಂದಿದೆ.ಸದರಿ ಮೊತ್ತಕ್ಕೆ 1ನೇ ಎದುರುದಾರರು ಜವಾಬ್ದಾರರಾಗಿರುತ್ತಾರೆ.

3) ಎರಡನೇ ಎದುರುದಾರರು ದಿ:05/11/14 ರಿಂದ 26/05/16 ರವರೆಗೆ ವಡಗೂರು ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಿರುವುದಾಗಿ ಹೇಳಿದ್ದು, ಸದರಿಯವರ ಅವಧಿಯಲ್ಲಿ (ದಿ:28/12/15 ರಿಂದ 16/02/16) ಅಂಗವಿಕಲರ ಪ್ರೋತ್ಸಾಹ ಧನ ಎಂದು ಒಟ್ಟು ರೂ. 12,000/- ಗಳನ್ನು ಬೇರೆ ಬೇರೆ ಚೆಕ್ ಗಳ ಮುಖೇನ ನೀಡಿರುವುದು (ಅಂಗವಿಕಲ ಕಲ್ಯಾಣ ಶೇ.3 ಯೋಜನೆ) ಕಂಡು ಬಂದಿದೆ. ಸರ್ಕಾರದ ಸುತ್ತೋಲೆ ಸಂ:ಗ್ರಾಅಪ 440 ಗ್ರಾಪಂಅ 2015 ದಿ:03-09-15 ರಲ್ಲಿ ಹೇಳಿದ ಕಾರ್ಯಕ್ರಮಗಳ ಪೈಕಿ ಯಾವ ಕಾರ್ಯಕ್ರಮಕ್ಕೆ ಸದರಿ ಮೊತ್ತವನ್ನು ವಿನಿಯೋಗಿಸಿದೆ ಎಂಬ ಬಗ್ಗೆ ಹಾಗೂ ಸದರಿ ಫಲಾನುಭವಿಗಳಿಗೆ ಹಣ ಪಾವತಿ ಮಾಡುವ ಬಗ್ಗೆ ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯ ನಿರ್ಣಯ, ಮುಂತಾದ ದಾಖಲೆಗಳಿಲ್ಲ.

4) ವಡಗೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ಮಲ ಭಾರತ ಅಭಿಯಾನ ಮತ್ತು ಸ್ವಚ್ಛ ಭಾರತ ಮಿಷನ್ ಯೋಜನೆ ಅಡಿಯಲ್ಲಿ ಶೌಚಾಲಯ ನಿರ್ಮಿಸಿಕೊಂಡಿರುವ ಒಟ್ಟು 140 ಫಲಾನುಭವಿಗಳಿಗೆ ರೂ.14,80,400/- ಗಳನ್ನು ಆಯಾಯ ಫಲಾನುಭವಿಗಳ ಖಾತೆಗಳಿಗೆ ಜಮಾ ಮಾಡುವಂತೆ 2ನೇ ಎದುರುದಾರರು ಪ್ರಗತಿ ಗ್ರಾಮೀಣ ಬ್ಯಾಂಕ್‌ನ ವ್ಯವಸ್ಥಾಪಕರಿಗೆ ಸೂಚಿಸಿದ್ದು, ಸದರಿ 140 ಫಲಾನುಭವಿಗಳನ್ನು ಆಯ್ಕೆ ಮಾಡಿದ ಬಗ್ಗೆ ಪಂಚಾಯತ್ ನಡವಳಿ, ಅನುಮೋದಿತ ಫಲಾನುಭವಿಗಳ ಪಟ್ಟಿ ಮತ್ತು ಸದರಿ ಫಲಾನುಭವಿಗಳು ಶೌಚಾಲಯ ನಿರ್ಮಿಸಿಕೊಂಡ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಒಬ್ಬರೇ ಫಲಾನುಭವಿಗೆ ಎರಡು ಬಾರಿ ಹಣ ಸಂದಾಯ ಮಾಡಿದ್ದಲ್ಲದೇ ಯೋಜನೆಯ ಫಲಾನುಭವಿಯಲ್ಲದ ವ್ಯಕ್ತಿಯ ಖಾತೆಗೆ ರೂ. 12,000/-ಗಳನ್ನು ಜಮಾ ಮಾಡಿರುವುದು ಕಂಡು ಬಂದಿದೆ.

5) ಎದುರುದಾರರ ಕರ್ತವ್ಯದ ಅವಧಿಯಲ್ಲಿ ಪಂಚಾಯತ್‌ನ 13ನೇ ಹಣಕಾಸು ಯೋಜನೆಯಡಿ ಮಾಡಿರುವ ಖರ್ಚುಗಳ ಪೈಕಿ ಕೆಲವು ಖರ್ಚುಗಳು 1 ಲಕ್ಷಕ್ಕಿಂತ ಹೆಚ್ಚಾಗಿರುತ್ತದೆ ಹಾಗೂ ಸದರಿ

ಮೊತ್ತವನ್ನು ಪಂಚಾಯತ್‌ನ ಶೀ.25 ರ ಖಾತೆಗೆ ವರ್ಗಾಯಿಸಿದೆಯೆಂದು ನಗದು ವಹಿಯಲ್ಲಿ ದಾಖಲಿಸಿದೆ. ಒಂದು ಉದ್ದೇಶಕ್ಕೆ ಮಂಜೂರಾದ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸಿರುವುದು ಕಂಡು ಬಂದಿದೆ ಹಾಗೂ ಕೆಲವು ಖರ್ಚುಗಳಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳಿಲ್ಲ. ಕೆಲವು ಖರ್ಚುಗಳಿಗೆ ಸಂಬಂಧಿಸಿದಂತೆ ಪಂಚಾಯತ್ ಸಿಬ್ಬಂದಿ ಹೆಸರಿಗೆ ಚೆಕ್‌ಗಳನ್ನು ನೀಡಿರುವುದು ಕಂಡು ಬಂದಿರುತ್ತದೆ.ಉಳಿದ ಖರ್ಚುಗಳು ಒಂದು ಲಕ್ಷಕ್ಕಿಂತ ಕಡಿಮೆ ಇದ್ದು, 2ನೇ ಎದುರುದಾರರು ನಗದು ವಹಿಯಲ್ಲಿ ದಾಖಲಿಸಲಾದ ಸದರಿ ಖರೀದಿಗಳಿಗೆ ಸಂಬಂಧಿಸಿದಂತೆ ದರಪಟ್ಟಿಗಳನ್ನು ಆಹ್ವಾನಿಸಿದ ಬಗ್ಗೆ, ರಸೀದಿ, ವೋಚರ್ ಮುಂತಾದ ದಾಖಲೆಗಳಿಲ್ಲ.

6) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಜೆಟ್) ನಿಯಮಾವಳಿಗಳು, 1995ರ ನಿಯಮ 20ರನ್ವಯ ಪ್ರತಿ ಖರ್ಚಿಗೆ ಸಂಬಂಧಿಸಿದಂತೆ ಬಿಲ್ ಅಥವಾ ವೋಚರ್‌ಗಳು ಇರಬೇಕೆನ್ನುವುದು ಕಡ್ಡಾಯವಾಗಿದೆ. ಆ ರೀತಿಯ ಬಿಲ್ ಮತ್ತು ವೋಚರ್‌ಗಳು ಲಭ್ಯವಿಲ್ಲ. ಹಿಂದಿನ ಕಂಡಿಕೆಗಳಲ್ಲಿ ಹೇಳಿದ ಖರ್ಚುಗಳಿಗೆ ಸಂಬಂಧಿಸಿದಂತೆ ಚೆಕ್‌ಗಳನ್ನು ನೀಡಿದ ಬಗ್ಗೆ ಚೆಕ್‌ಗಳನ್ನು ಪಡೆದವರಿಂದ ಸ್ವೀಕೃತಿಯನ್ನು ಪಡೆಯಬೇಕೆಂದು ನಿಯಮ 26 ರನ್ವಯ ಕಡ್ಡಾಯವಾಗಿದೆ. ಸದರಿ ಚೆಕ್‌ಗಳನ್ನು ಆಯಾಯ ವ್ಯಕ್ತಿ/ಸಂಸ್ಥೆ ಹೆಸರಿಗೆ ನೀಡಿದ ಬಗ್ಗೆ ಸ್ವೀಕೃತಿಯನ್ನು ಪಡೆದ ಬಗ್ಗೆ ದಾಖಲೆಯಿಲ್ಲ. ಕಾರಣ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಜೆಟ್) ನಿಯಮಾವಳಿಗಳು, 1995 ರ ನಿಯಮ 20 ಮತ್ತು 26 ರ ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

7) ಕೆಎಫ್‌ಸಿ ಪರಿಚ್ಛೇದ 17 ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾದಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ)ರನ್ವಯ ರೂ.5000/- ಮೀರಿದ ರೂ.1,00,000/- ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೋಟೇಷನ್ ಕರೆಯುವ ಮೂಲಕ ಮಾಡತಕ್ಕದ್ದು. ಕೆಎಫ್‌ಸಿ ಪರಿಚ್ಛೇದ 57 ರನ್ವಯ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕು. ಆದ್ದರಿಂದ ಸದರಿ ಎಲ್ಲಾ ಖರ್ಚುಗಳಿಗೆ ಸಂಬಂಧಿಸಿದಂತೆ ಕೆಎಫ್‌ಸಿ ನಿಯಮಾವಳಿಗಳ ಉಲ್ಲಂಘನೆಯಾಗಿದೆ.

8) 2ನೇ ಎದುರುದಾರರ ಅವಧಿಯಲ್ಲಿನ ದುರುಪಯೋಗದ ಒಟ್ಟು ಮೊತ್ತ ರೂ.32,59,160/- ಗಳಾಗಿದ್ದು, ಸದರಿ ಮೊತ್ತಕ್ಕೆ 2ನೇ ಎದುರುದಾರರು ಜವಾಬ್ದಾರರಾಗಿದ್ದಾರೆ.

9) ಸದರಿ ಎಲ್ಲಾ ಹಣದ ವ್ಯವಹಾರಗಳು ದೂರಿನ 1 ಮತ್ತು 2ನೇ ಎದುರುದಾರರ ಕರ್ತವ್ಯದ ಅವಧಿಯಲ್ಲಿ ಆಗಿರುವುದು ದಾಖಲೆಗಳಲ್ಲಿ ಸ್ಪಷ್ಟವಾಗಿ ಕಂಡು ಬಂದಿದೆ. ಹಿಂದಿನ ಕಂಡಿಕೆಗಳಲ್ಲಿ ಹೇಳಿದ ಕಾರಣಗಳಿಗೆ 1ನೇ ಎದುರುದಾರರ ದುರುಪಯೋಗದ ಒಟ್ಟು ಮೊತ್ತ ರೂ.1,25,051/-ಗಳಾಗಿದೆ. 2ನೇ ಎದುರುದಾರರ ದುರುಪಯೋಗದ ಒಟ್ಟು ಮೊತ್ತ ರೂ.32,59,160/- ಗಳಿಗೆ ಜವಾಬ್ದಾರರಾಗಿದ್ದಾರೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, 1 ಮತ್ತು 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಕಡತದಲ್ಲಿನ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1ರಿಂದ 4ನೇ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ / ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

ಅದಲ್ಲದೆ 1 ಮತ್ತು 2ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ ಶಿಫಾರಸ್ಸು ಮಾಡಿರುತ್ತಾರೆ ಹಾಗೂ 1 ಮತ್ತು 2ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಸದರಿ ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ 1 ಮತ್ತು 2ನೇ ಎದುರುದಾರರಾದ ಶ್ರೀ ಎಂ.ಕೃಷ್ಣಪ್ಪ, ಕಾರ್ಯದರ್ಶಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ ವೈಶಾಲಿ ಸಾಗರ, ವಡಗೂರು ಗ್ರಾಮ ಪಂಚಾಯತ್, ಇವರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14(ಎ) ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/249/ಗ್ರಾಪಂಕಾ/2019**
**ಬೆಂಗಳೂರು, ದಿನಾಂಕ:19-09-2019**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆ ಮತ್ತು ತಾಲ್ಲೂಕು ವಡಗೂರು ಗ್ರಾಮ ಪಂಚಾಯತ್‌ನ 1) ಕಾರ್ಯದರ್ಶಿಯಾಗಿದ್ದ ಶ್ರೀ ಎಂ.ಕೃಷ್ಣಪ್ಪ ಮತ್ತು 2) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ ವೈಶಾಲಿ ಸಾಗರ ರವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14(ಎ) ರಡಿ ಮಾನ್ಯ ಉಪಲೋಕಾಯುಕ್ತರು ರವರಿಗೆ ವಹಿಸಿ ಆದೇಶಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು ಆಪಾದಿತರಿಗೆ ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Narayan Deg. 19/9/19
(ಡಿ.ಜಿ ನಾರಾಯಣ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಬೆಂಗಳೂರು, ಕರ್ನಾಟಕ.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. **(ಪುಟ 1 ರಿಂದ 231 ರವರೆಗೆ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).**
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೋಲಾರ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕೋಲಾರ.
6. ಶ್ರೀಮತಿ ವೈಶಾಲಿ ಸಾಗರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ವಡಗೂರು ಗ್ರಾಮ ಪಂಚಾಯತ್, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
7. ಶ್ರೀ ಎಂ.ಕೃಷ್ಣಪ್ಪ, ಕಾರ್ಯದರ್ಶಿ, ವಡಗೂರು ಗ್ರಾಮ ಪಂಚಾಯತ್, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.